# ತಾಂತ್ರಿಕ ಆವಿಷ್ಕಾರ ನಡೆದಿದೆ



## ಶರತ್ ಕೆ.ಪಿ.

### ಸ್ಟಾರ್ ಸುವರ್ಣದ 'ಪುಟ್ಟಮಲ್ಲಿ'ಯ ಅಭಯ್

★ *ಅಭಿನಯ ಶುರುವಾಗಿದ್ದು ಹೇಗೆ?*

ನಟನೆಯ ತರಬೇತಿ ಇರಲಿಲ್ಲ. ಫೇಸ್‌ಬುಕ್‌ನಲ್ಲಿ ನನ್ನ ಫೋಟೊ ನೋಡಿ ದಿಲೀಪ್ ರಾವ್ ಫೋನ್ ಮಾಡಿ ಕರೆದರು. 'ಜಸ್ಟ್ ಮಾತ್ ಮಾತಲ್ಲಿ'ಗೆ ಆಡಿಷನ್ ನೀಡಿದೆ. ಆಯ್ಕೆ ಮಾಡಿದರು. ಅನುಭವ ಇಲ್ಲದೆ, ನೇರವಾಗಿ ಅಭಿನಯ ಸಾಗರಕ್ಕೆ ಧುಮುಕಿದ್ದೆ. ಅದೇ ವೃತ್ತಿ ಎಂಬ ಹಂಬಲದಲ್ಲಿ ಕಲಿಕೆ ಆರಂಭವಾಯಿತು. 139 ಕಂತುಗಳು ಧಾರಾವಾಹಿ ಪ್ರಸಾರವಾಯಿತು. ನಂತರ ಒಂದು ಸಾಕ್ಷ್ಯ ಚಿತ್ರ ಮಾಡಿದೆವು. ಅಷ್ಟರಲ್ಲಿ 'ರಾಧಾ ರಮಣ'ದಲ್ಲಿ ಅವಕಾಶ ಸಿಕ್ಕಿತು. ಅದರ ಬೆನ್ನಲ್ಲೇ 'ನೀವು ಕರೆ ಮಾಡಿದ ನಂಬರ್...' ಸಿನಿಮಾದಲ್ಲಿ ನಟಿಸಿದೆ. ಈಗ ಪುಟ್ಟಮಲ್ಲಿ.

★ *ಏನಾಗಬೇಕು ಅಂದುಕೊಂಡಿದ್ರಿ?*

ನಾನು ಸಾಫ್ಟ್‌ವೇರ್ ಎಂಜಿನಿಯರ್. ಎರಡು ವರ್ಷ ಕೆಲಸ ಮಾಡಿದ್ದೆ. ನನಗೆ ಗ್ರಾಫಿಕ್ ಬಗ್ಗೆ ಆಸಕ್ತಿ ಇತ್ತು. ಅದಕ್ಕಾಗಿ ಕೆಲಸ ಬಿಟ್ಟು ಗ್ರಾಫಿಕ್ ಅಧ್ಯಯನದಲ್ಲಿ ತೊಡಗಿದೆ. ಅದೇ ಸಮಯದಲ್ಲಿ ಅಪಘಾತವಾಗಿ ಕಾಲಿಗೆ ಪೆಟ್ಟಾಯಿತು. ಆರು ತಿಂಗಳು ವಿಶ್ರಾಂತಿ ತೆಗೆದುಕೊಳ್ಳುವಂತೆ ವೈದ್ಯರು ಶಿಫಾರಸು ಮಾಡಿದರು. ಗ್ರಾಫಿಕ್ ಕೋರ್ಸ್ ಅರ್ಧಕ್ಕೆ ನಿಂತಿತು. ಗುಣಮುಖನಾಗುವ ಹೊತ್ತಿಗೆ ಸರಿಯಾಗಿ ನಟನೆಗೆ ಅದಷ್ಟಕ್ಕೆ ಅದೇ ಅವಕಾಶ ಬಂತು. ಒಂದು ಪ್ರಯತ್ನ ಮಾಡೋಣ ಎಂದು ಬಂದವನು ಇಲ್ಲೇ ಉಳಿದೆ. ಹವ್ಯಾಸವಾಗಿ ಗ್ರಾಫಿಕನ್ನೂ ಮಾಡುತ್ತಿದ್ದೇನೆ. ಅದನ್ನು ನಟನೆಯ ಜೊತೆ ಜೊತೆ ತೆಗೆದುಕೊಂಡು ಹೋಗುತ್ತಿದ್ದೇನೆ. ಮುಂದೆ ಅದಕ್ಕೂ ಒಳ್ಳೆಯ ಅವಕಾಶ ಸಿಕ್ಕೇ ಸಿಗುತ್ತದೆ.

★ *ಅಭಯನ ಕಥೆ ಏನು?*

ಮಧ್ಯಮ ಕುಟುಂಬದ ಆದರ್ಶ ಯುವಕ. ಓದಲು ವಿದೇಶಕ್ಕೆ ಹೋಗಿ ಬಂದಿದ್ದೇನೆ. ಅಲ್ಲಿಯೇ ಹುಡುಗಿಯೊಬ್ಬಳನ್ನು ಪ್ರೀತಿಸುತ್ತೇನೆ. ಪೋಷಕರ ಅನುಮತಿ ಪಡೆದು ಮದುವೆ ಆಗುವ ಯೋಚನೆ ಇರುತ್ತದೆ. ಬರುವಷ್ಟರಲ್ಲಿ ಅಪರಿಚಿತ ಹುಡುಗಿ ಮನೆಯಲ್ಲಿ ಇರುತ್ತಾಳೆ. ಯಾರು ಎಂದು ವಿಚಾರಿಸಿದಾಗ ತಂದೆಯ ಸ್ನೇಹಿತನ ಮಗಳು ಅನಾಥಳಾದ ಕಥೆ ಗೊತ್ತಾಗುತ್ತದೆ. ಅವಳೇ ಪುಟ್ಟಮಲ್ಲಿ. ಅವಳ ಬಗ್ಗೆ ಸಿಂಪತಿ ಬೆಳೆಯುತ್ತದೆ. ಅವಳ ಮೇಲೆ ನಮ್ಮ ಅತ್ತಿಗೆಗೆ ಅಸೂಯೆ. ಯಾವಾಗಲೂ ಆಕೆಯ ವಿರುದ್ಧ ಸಂಚನ್ನು ರೂಪಿಸುತ್ತಾರೆ. ಆದರೆ ನಾನು ಆಕೆಯ ರಕ್ಷಣೆಗೆ ಒತ್ತುಕೊಡುತ್ತೇನೆ. ಅವಳ ಮದುವೆಗೆ ಅಪ್ಪ ವರ ಹುಡುಕಾಟ ನಡೆಸುತ್ತಾರೆ. ನಾನೂ ಪ್ರಯತ್ನ ಮಾಡುತ್ತೇನೆ. ಎಲ್ಲವೂ ಮುರಿದು ಹೋಗುತ್ತಿರುತ್ತವೆ. ಹೀಗಿರುವಾಗಲೇ ಒಬ್ಬ ಹುಡುಗನನ್ನು ನಾನೇ ನೋಡುತ್ತೇನೆ. ಮದುವೆ ನಡೆಯುವ ದಿನ ಆ ಹುಡುಗನನ್ನು ಪೊಲೀಸರು ಬಂಧಿಸುತ್ತಾರೆ. ಅವನು ವಂಚಕ ಎನ್ನುವುದು ಆಗ ಗೊತ್ತಾಗುತ್ತದೆ. ನಮ್ಮ ತಂದೆಗೆ ಆಗ ಹೃದಯಾಘಾತ ಆಗುತ್ತದೆ. ಕೂಡಲೇ ನನಗೆ ಮದುವೆ ಆಗುವಂತೆ ಒತ್ತಡ ಹಾಕುತ್ತಾರೆ. ನಾನು ಪ್ರೀತಿಸುವ ಹುಡುಗಿಯನ್ನು ಬಿಟ್ಟು ಪುಟ್ಟಮಲ್ಲಿ ಜೊತೆ ಮದುವೆಯಾಗುತ್ತೇನೆ. ನನ್ನ ಪ್ರೇಯಸಿಗೆ ದೊಡ್ಡ ಅಪಘಾತವಾಗುತ್ತದೆ. ಅವಳಿಗೆ ಅಘಾತದ ಸುದ್ದಿ ಹೇಳುವಂತಿಲ್ಲ. ಆದರೆ ಅದನ್ನೇ ಇಟ್ಟುಕೊಂಡು ನನಗೆ ಬ್ಲ್ಯಾಕ್‌ಮೇಲ್ ಮಾಡಲಾಗುತ್ತಿದೆ. ಅಷ್ಟರಲ್ಲಿ ಆಸ್ತಿಗಾಗಿ ಪುಟ್ಟಮಲ್ಲಿ ಅಪಹರಣ ಮಾಡಲು ಯತ್ನಿಸಿದವರು ನನ್ನ ಪ್ರಿಯತಮೆಯನ್ನು ಅಪರಿಸುತ್ತಾರೆ. ಏನೇ ಆದರೂ ಅಭಯ ಸಾಧು. ಎಲ್ಲವನ್ನೂ ಸಹಿಸಿಕೊಂಡು ನಿಭಾಯಿಸಿಕೊಂಡು ಹೋಗುತ್ತಾನೆ.

★ *ವ್ಯಾಯಾಮ ಮಾಡುತ್ತೀರಾ?*

ಮೊದಲು ಜಿಮ್‌ಗೆ ಹೋಗುತ್ತಿದ್ದೆ. ನಿಯಮಿತವಾಗಿ ಹೋಗುವುದು ಕಷ್ಟವಾಗಿ ಬಿಟ್ಟೆ. ಸರಳವಾಗಿ ವ್ಯಾಯಾಮವನ್ನು ಮನೆಯಲ್ಲೇ ಮಾಡುತ್ತೇನೆ. ಊಟೋಪಚಾರದಲ್ಲಿ ಸ್ವಲ್ಪ ಜಾಗ್ರತೆ ತೆಗೆದುಕೊಳ್ಳುತ್ತೇನೆ. ಬೇರೆ ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲ.

■ ರಾಘವೇಂದ್ರ